

# ನಿಮ್ಮ ಮಗುವಿನ ತ್ವಚೆ ಅತಿ ಸೂಕ್ಷ್ಮವಾಗಿದೆಯೇ ಎಂದು ಹೇಗೆ ತಿಳಿಯುವುದು?


## Dr. Ranjan Kumar Pejaver

**FRCP, FRCPCH(UK), FNNF, FIAP**
**Immediate Past President of National Neonatology Forum of India (NNF)**
**Past Chairperson of Neonatology Chapter of Indian Academy of Pediatrics (IAP)**
**Chief Neonatologist, People Tree at Meenakshi Hospitals, Bengaluru, India**


ಹೊಸದಾಗಿ ಪೋಷಕರಾದವರಿಗೆ ತಮ್ಮ ಮಗುವಿನ ತ್ವಚೆ ಸಾಮಾನ್ಯ ಅಥವಾ ಸೂಕ್ಷ್ಮವಾಗಿದೆಯೇ ಎಂದು ಕಂಡುಕೊಳ್ಳುವುದು ಒಂದು ದೊಡ್ಡ ಸವಾಲೆನಿಸುತ್ತದೆ. ನವಜಾತ ಶಿಶುವಿನ ತ್ವಚೆಯು ವಯಸ್ಕರ ಚರ್ಮಕ್ಕಿಂತ ಹೆಚ್ಚು ತೆಳುವಾಗಿದ್ದು, ಶಿಶುವಿಗೆ ಒಂದು ವರ್ಷವಾಗುವವರೆಗೂ ಅದು ಬೆಳೆಯುತ್ತಿರುತ್ತದೆ. ಸ್ನಾನದ ನಂತರ, ಲೋಷನ್ ಹಚ್ಚಿದ ನಂತರ, ಬಟ್ಟೆಗಳನ್ನು ಧರಿಸಿದ ಮೇಲೆ ಅಥವಾ ಮಗುವನ್ನು ಹೊದಿಕೆಯಲ್ಲಿ ಸುತ್ತಿದ ನಂತರ ಶಿಶುವಿನ ತ್ವಚೆಯ ಶುಷ್ಕತೆ, ಕೆಂಪಾದ ದದ್ದುಗಳು, ತ್ವಚೆಯ ಬಿಗಿತ, ಕಿರಿಕಿರಿ ಹಾಗೂ ಚರ್ಮದಲ್ಲಾಗುವ ತುರಿಕೆ ಮತ್ತು ಉರಿಯೂತದ ಚಿಹ್ನೆಗಳನ್ನು ಗಮನಿಸಬೇಕು. ಈ ಲಕ್ಷಣಗಳು ಶಮನವಾಗದೇ ಮುಂದುವರಿದರೆ ನಿಮ್ಮ ಮಗು ಸೂಕ್ಷ್ಮ ತ್ವಚೆಯನ್ನು ಹೊಂದಿದೆ ಎಂದು ತಿಳಿಯಬಹುದು.

ಇದಕ್ಕೆ ನೀವೇನು ಮಾಡಬಹುದು? ನಿಮ್ಮ ಮಗುವಿನ ಸೂಕ್ಷ್ಮ ತ್ವಚೆಗೆ ಪ್ರತಿರೋಧ ಉಂಟುಮಾಡುವ ಕಾರಣಗಳನ್ನು ಗುರುತಿಸಿ. ಶಿಶುಗಳ ಸೂಕ್ಷ್ಮ ತ್ವಚೆಗೆಂದೇ ವಿಶೇಷವಾಗಿ ತಯಾರಿಸಲಾದ, ಸೌಮ್ಯ ಮತ್ತು ಸುರಕ್ಷಿತ ಅಂಶಗಳನ್ನು ಒಳಗೊಂಡ ಬೇಬಿಕೇರ್ ಉತ್ಪನ್ನಗಳನ್ನೇ ಆಯ್ಕೆ ಮಾಡಿ. ಶಿಶುಗಳ ಸೂಕ್ಷ್ಮ ತ್ವಚೆಯ ಕಾಳಜಿ ವಹಿಸುವ ಏಕೈಕ ಮಂತ್ರ, "ಮಿತವೇ ಹಿತ." ನಿಮ್ಮ ಮಗುವಿಗೆ ಆಗಾಗ್ಗೆ ಸ್ನಾನ ಮಾಡಿಸುವುದನ್ನು ತಪ್ಪಿಸಿ, ಆದರೆ ವಿಶೇಷವಾಗಿ ಚರ್ಮದ ಮಡಿಕೆಗಳು ಮತ್ತು ಸಂದುಗಳನ್ನು ನಿಯಮಿತವಾಗಿ ಸ್ವಚ್ಛಗೊಳಿಸಿ.

5.5 pH ಹೊಂದಿರುವ ಸಾಬೂನುಮುಕ್ತ ಕ್ಲೆನ್ಸಿಂಗ್ ಬಾರ್ ಬಳಸಿ ನಿಮ್ಮ ಮಗುವಿಗೆ ಉಗುರು ಬೆಚ್ಚಗಿನ ನೀರಿನಲ್ಲಿ ಸ್ನಾನ ಮಾಡಿಸಿ. ಇದು ನಿಮ್ಮ ಮಗುವಿನ ತ್ವಚೆಯನ್ನು ಸ್ವಚ್ಛಗೊಳಿಸಿ, ಪೋಷಿಸಿ ಮತ್ತು ತೇವಾಂಶಯುಕ್ತಗೊಳಿಸಿ, ತ್ವಚೆ ನೈಸರ್ಗಿಕವಾಗಿ ಕಾರ್ಯನಿರ್ವಹಿಸುವಂತೆ ಮಾಡುತ್ತದೆ. ಸ್ನಾನದ ನಂತರ ಟವಲ್‌ನಿಂದ ಮೃದುವಾಗಿ ಒರೆಸಿ (ಗಟ್ಟಿಯಾಗಿ ಉಜ್ಜಬೇಡಿ). ಬಳಿಕ ಮಿತವಾಗಿ ಮಾಯಿಶ್ಚರೈಸರ್ ಹಚ್ಚಿ. ನಂತರವೂ ತ್ವಚೆಯ ಸ್ಥಿತಿಯು ಸುಧಾರಿಸದಿದ್ದಲ್ಲಿ ನಿಮ್ಮ ಶಿಶುವೈದ್ಯರನ್ನು ಸಂಪರ್ಕಿಸಿ.